ಖುದ್ದಾಗಿ ಲ್ಯಾಪ್‌ಟಾಪಿನಲ್ಲಿ ಅದರ ಆಕಾರ ರೂಪಿಸುತ್ತಿದ್ದ. ಲಹರಿ ಬಂದಿತೆಂದರೆ ಮನೋಹರನ ಕೆಲಸದ ವೈಖರಿಯೇ ಬೇರೆ. ಖುಷಿ ಕೊಟ್ಟ ಕೆಲಸಕ್ಕೆ ಕೆಲವೊಮ್ಮೆ ಹೇಳಿದ್ದಕ್ಕಿಂತ ಕಡಿಮೆಯೇ ರೊಕ್ಕ ಪಡೆಯುತ್ತಿದ್ದುದು ಮೊದಮೊದಲು ಗೋಪಿಗೆ ವಿಚಿತ್ರವಾಗಿ ಕಂಡಿತ್ತು. ಒಮ್ಮೆ ಕೇಳಿದಾಗ, 'ಅವರು ಕೊಟ್ಟ ಕೆಲಸಕ್ಕೆ ದುಡ್ಡೇ ಮುಟ್ಟಬಾರದಿತ್ತೊ. ಅಷ್ಟು ಸುಖ ಕೊಟ್ಟಿತು' ಎನ್ನುತ್ತಿದ್ದ ಮನೋಹರ.

ಆದರೆ ಇವತ್ತು ಅವೆಲ್ಲ ವ್ಯತ್ಯಾಸವಾಗುತ್ತಿದ್ದುದು ಇಬ್ಬರ ಗಮನಕ್ಕೂ ಬಂದಿತು. ಮನೋಹರನ ಕೆಲಸದ ಮೇಲಿನ ಉದಾಸೀನತೆಯನ್ನ ಕಾಣುತ್ತ ಗೋಪಿ ಏನೂ ಹೇಳಲಾಗದೇ ತನಗೆ ಹೊಳೆದದ್ದನ್ನು ಮಾಡತೊಡಗಿದ. ಯಾರೋ ಗಿರಾಕಿ ಬಂದಾಗ ಆತನತ್ತ ತಲೆ ಎತ್ತಿ ನೋಡದ ಮನೋಹರನನ್ನ ಗೋಪಿಯೇ ಎಚ್ಚರಿಸಿದ. 'ಅವರಿಗೇನು ಬೇಕು ನೀನೇ ಕೇಳು' ಎಂದು ಮನೋಹರ ಕತ್ತುಬಗ್ಗಿಸಿಯೇ ಹೇಳಿದ. ಸ್ವಲ್ಪ ಹೊತ್ತಿನ ನಂತರ ಬಂದ ಪರಿಚಿತರೊಬ್ಬರು 'ಸ್ವಲ್ಪ ಅರ್ಜೆಂಟಿದೆ. ಬೇಗ ಕೊಡಲಿಕ್ಕಾಗ್ತದಾ' ಎಂದಾಗ ತಟ್ಟನೆ ಮನೋಹರ 'ಅಷ್ಟೆಲ್ಲ ಅರ್ಜೆಂಟಿದ್ರೆ ನೀವು ಬೇರೆ ಕಡೆ ಮಾಡ್ಸಿ' ಎಂದು ಸಿಡುಕಿದ. ಬೆಪ್ಪಾದ ಅವರು ಮರುಮಾತನಾಡದೇ ಹೋದರು. ಕೆಲಸಕ್ಕೆ ಕುಳಿತವನೇ, 'ಇವತ್ತು ಅವರಿಗೆ ಅದು ಕೊಡೋದಿದೆ, ಇವರಿಗೆ ಇದು ಕೊಡೋದಿದೆ. ಅಲ್ಲಿ ಹೋಗಬೇಕಲ್ಲ ಮಾರಾಯಾ' ಎಂದೆಲ್ಲ ತುರುಸಿನಲ್ಲೇ ಇರುತ್ತಿದ್ದ ಮನೋಹರ ಇವತ್ತು ನಿರಾಸಕ್ತನಾಗಿ ಕೂತದ್ದು ಗೋಪುವಿಗೆ ಆಶ್ಚರ್ಯಕ್ಕಿಂತ ಹೆಚ್ಚಾಗಿ ವ್ಯಾಕುಲತೆ ಹುಟ್ಟಿಸಿತ್ತು.

ಹನ್ನೊಂದಕ್ಕೆಲ್ಲ ತನ್ನ ಅಂಗಡಿಗೆ ಬಂದು 'ಮಾಮೂ' ಎನ್ನುತ್ತಿದ್ದ ಮನೋಹರ ಹನ್ನೆರಡಾದರೂ ಬಾರದಿರುವದು ಬಾಬಣ್ಣನಿಗೆ ಗೊಂದಲ ಹುಟ್ಟಿಸಿತ್ತು. ಮುಂಜಾನೆಯೇ ಅಂಗಡಿ ಕದ ತೆಗೆದದ್ದರ ಬಗ್ಗೆ ಚಾ ಕುಡಿಯುವಾಗ ಕೇಳಿದರಾಯ್ತೆಂದು ಸುಮ್ಮನಿದ್ದರೂ ಅದು ಬೇರೆ ಕೆದಕುತ್ತಿತ್ತು. ಅವನು ಬಾರದಿದ್ದರೂ ತಾನು ಅವನ ಬಳಿ ಹೋಗುವಾ ಅಂದುಕೊಂಡರೂ ಅಂಗಡಿಕಟ್ಟೆಯ ಮೇಲೆ ಬಂದು ಕೂತಿದ್ದ ಗಿರಾಕಿಯೊಬ್ಬ ಸೈಕಲ್ ತಗೊಂಡೇ ಹೋಗೋದು ಎಂದು ರಚ್ಚೆ ಹಿಡಿದಿದ್ದ. ಚಾನಾರೂ ಕುಡಿದುಬರ್ತೀನೋ ಎಂದರೂ ಬಿಡದೇ ತಾನೇ ಹೋಗಿ ಹೋಟೆಲಿಂದ ಚಾ ತಂದುಕೊಟ್ಟಿದ್ದ. ಸೈಕಲ್ ರಿಪೇರಿಯಲ್ಲಿದ್ದರೂ ಬಾಬಣ್ಣನಿಗೆ ಮನೋಹರನ ಬಗ್ಗೆಯೇ ಮನಸ್ಸು ಕೊರೆಯುತ್ತಿತ್ತು.

ಎರಡು ಬಾರಿ ಚಾ ಕುಡಿಯಲು ಎಚ್ಚರಿಸಿದರೂ ಕಿವಿಗೊಡದ ಮನೋಹರ ಮೂರನೇ ಬಾರಿ ಗೋಪಿ ಹೇಳಿದಾಗ, 'ನೀ ಹೋಗಿ ಕುಡಿದು ಬಾ' ಎಂದು ಗದರಿದ. ಆಗಾಗ್ಗೆ ತನ್ನ ನಂತರ ಹೋಗುತ್ತಿದ್ದ ಮನೋಹರ ಈಗಲೂ ಹಾಗೇ ಮಾಡಿಯಾನೆಂದು ಗೋಪಿ ಚಾಕುಡಿದು ಬಂದರೂ ಮನೋಹರ ಅಲುಗಾಡಲಿಲ್ಲ. ಬೆಳಗಿನಿಂದ ಕುತ್ತಿಗೆ ಮೇಲೆ ಕೂತಿದ್ದ ಗಿರಾಕಿಯನ್ನು ಕಳಿಸಿದ ಬಾಬಣ್ಣ ಎಣ್ಣೆ, ಗ್ರೀಸ್ ಮೆತ್ತಿದ್ದ ಕೈ ತೊಳೆದು, ಒರೆಸಿಕೊಳ್ಳುತ್ತ ಮನೋಹರನ ಅಂಗಡಿಗೆ ಬಂದ. ಬಾಬಣ್ಣನಿಗೆ ಮನೋಹರನ ತಂದೆ ನೀಲಕಂಠ ಖಾಸಾ ದೋಸ್ತನೇ ಆಗಿದ್ದ. ಮನೋಹರನ ಕುಟುಂಬದ ಎಲ್ಲವನ್ನೂ ಅರಿತವನೇ ಆಗಿದ್ದ. ಗೆಳೆಯನ ಕುಟುಂಬದ ಕಷ್ಟಕ್ಕೆ ಸದಾ ಸಹಾನುಭೂತಿ ಇಟ್ಟುಕೊಂಡಿದ್ದ ಬಾಬಣ್ಣನಿಗೆ ಆ ಕುಟುಂಬದ ಯಾರಿಗೆ ಏನೇ ಆದರೂ ಸಂಕಟವೇ ಆಗುತ್ತಿತ್ತು.

'ಹುಷಾರಿಲ್ವೇನೋ, ಮನ್ನೂ' ಎನ್ನುತ್ತಲೇ ಬಂದ ಬಾಬಣ್ಣನನ್ನ ಮನೋಹರ ಪಕ್ಕನೆ ತಲೆ ಎತ್ತಿ ನೋಡಲಿಲ್ಲ. 'ಎಂಥಾ ಆಯ್ತಾ ಮಾರಾಯಾ ನಿಂಗೆ' ಎಂದು ಬಾಬಣ್ಣ ಮತ್ತೆ ಕೇಳಿದಾಗ ಅವನತ್ತ ನೋಡಿದ ಮನೋಹರನ ಕಣ್ಣ ಬಿಂಬಗಳಲ್ಲಿ ಕಂಡೂ ಕಾಣದಂತೆ ನೀರಿನ ಪಸೆಯಿತ್ತು. ಆ ನೋಟದಲ್ಲೇ ಅವನೊಳಗಿನ ದುಗುಡವನ್ನ, ತಳಮಳವನ್ನ ಅರ್ಥ ಮಾಡಿಕೊಂಡಂತೆ, 'ಏನಾದ್ರೂ ಸಹಿಸ್ಕೋಬೇಕಾ. ಇಲ್ಲಾಂದ್ರೆ ಕಷ್ಟ ಆಗ್ತದೆ' ಎಂದಷ್ಟೇ ಸೂಚ್ಯವಾಗಿ ಹೇಳಿದ. ಬಾಬಣ್ಣನಿಗೆ ಮನೋಹರನಿಗೆ ಒದಗಿದ ಸಂಕಟ ಯಾವುದು? ಎನ್ನುವದು ಅರಿವಾಗದಿದ್ದರೂ ಕುಟುಂಬದ್ದಾಗಲೀ, ವ್ಯವಹಾರದ್ದಾಗಲೀ